
ಸುದ್ದಿಗಳು ಜನರಿಗೆ ಇನ್ನೂ ಗೊತ್ತಾಗಿಯೇ ಇಲ್ಲ! ಬಸವರಾಜನ ಸಾವಿನ ಸುದ್ದಿ ಕೂಡ ಎಷ್ಟೋ ದಿನಗಳು ಮುಗಿದ ಮೇಲೆ ಗೊತ್ತಾಗಬಹುದು! ಈ ಕೊರೊನಾ ಮಾಡಿದ ಅವಾಂತರ ಒಂದೇ? ಎರಡೇ? ನೂರಾರು. ಜನರು ಸೇರಲಿಲ್ಲ, ವಾಹನಗಳು ಚಲಿಸಲಿಲ್ಲ, ವಿಮಾನಗಳು ಹಾರಲಿಲ್ಲ. ಮೂಗು ಪಟ್ಟನೆ ಮುಚ್ಚಿಕೊಂಡಿತು. ಬಾಯಿ ತಟ್ಟನೆ ಹೊಲಿದುಕೊಂಡಿತು. ಪಿಳಿಪಿಳಿಯೆನ್ನುವ ಕಣ್ಣುಗಳು ಮಾತ್ರ ಮುಖಕ್ಕೆ ಯಾರ್‍ಯಾರು ಮಾಸ್ಕ್ ಹಾಕಿಕೊಂಡಿಲ್ಲವೆಂಬುದನ್ನು ಗಮನಿಸುತ್ತ ಅತ್ತಿಂದಿತ್ತ ಚಲಿಸುತ್ತಿರುತ್ತವೆ. ಮುಖಕ್ಕೆ ಬಟ್ಟೆ ಕಟ್ಟಿಕೊಳ್ಳಲಾರದೆ ಹೊರಬೀಳಲಾಗದು. ಕಣ್ಣು, ಮೂಗು, ಬಾಯಿ, ತುಟಿ, ಗದ್ದಗಳನ್ನು ಲಕ್ಷ್ಯ ಕೊಟ್ಟು ನೋಡುತ್ತಿದ್ದ ಯಾರೂ ಈಗ ಅವುಗಳತ್ತ ನೋಡುತ್ತಿಲ್ಲ. ಯಾರಾದರನ್ನು ದಿಟ್ಟಿಸಿ ನೋಡಿದರೆ ಅವರಿಗಿರುವ ರೋಗ ನಮಗೆಲ್ಲಿ ಹರಡೀತೋ ಎಂದು ಹೆದರುವುದೇ ಆಗಿದೆ. ಬಹಿರಂಗದ ಚೆಂದ ಕಟ್ಟಿಕೊಂಡು ಏನಾಗಬೇಕಾಗಿದೆಯೆಂದೆ ಬಹುಶಃ ಎಲ್ಲರೂ ಈಗ ಯೋಚಿಸುತ್ತಿರಬೇಕು! ಚೆಂದಾಗಿ ಉಸಿರಾಡಿದರೆ ಸಾಕು, ಮೂಗು ಕಟ್ಟಿಕೊಳ್ಳದಿದ್ದರೆ ಸಾಕು, ಗಂಟಲು ಕಿರಿಕಿರಿ ಎನ್ನಿಸದಿದ್ದರೆ ಸಾಕು, ಒಟ್ಟಿನಲ್ಲಿ ಪ್ರಾಣ ಉಳಿದರೆ ಸಾಕು ಎಂದು ಪ್ರತಿಯೊಬ್ಬರು ಪ್ರಾರ್ಥಿಸುವುದೇ ಆಗಿದೆ. ಬರೀ ಪ್ರಾರ್ಥಿಸಿದರೆ ಸಾಲದು. ಪ್ರಾರ್ಥನೆಯಿಂದ ಆತ ಉಳಿಯಲಿಲ್ಲ. ಬರೀ ಕೇಳಿಕೊಳ್ಳುವುದರಿಂದಲೇ ಯಾರಾದರನ್ನು ಉಳಿಸಿಕೊಳ್ಳುವುದು ಸಾಧ್ಯವಿದ್ದಿದ್ದರೆ ಬಸವರಾಜನನ್ನು ಉಳಿಸಿಕೊಳ್ಳಬಹುದಾಗಿತ್ತು ಎಂದು ಅನಿಸುತ್ತದೆ. ಸರಿಯಾದ ವೈದ್ಯಕೀಯ ಸೌಲಭ್ಯ ಸಿಕ್ಕಿದ್ದರೆ ಆತ ಜೀವಂತವಾಗಿರಬಹುದಿತ್ತು. ಅವನು ತನ್ನ ಆರೋಗ್ಯದ ಕಡೆ ಗಮನ ಕೊಡಲಿಲ್ಲವೆ? ರಕ್ತದೊತ್ತಡ, ಡಯಾಬಿಟೀಸ್‌ಗಳನ್ನು ಅಲಕ್ಷ್ಯ ಮಾಡಿದನೆ? ಆದರೆ ಡಾಕ್ಟರರು ಹೇಳಿದ್ದು ಆತ ತೀವ್ರ ಹೃದಯಾಘಾತಕ್ಕೆ ಒಳಗಾಗಿದ್ದ. ಕೊರೊನಾ ಕಾಲದಲ್ಲಿ ಹೃದಯಾಘಾತದಿಂದ ಆತ ತೀರಿಕೊಂಡಿದ್ದು ನನಗೆ ತುಂಬ ಕೆಟ್ಟೆನಿಸಿತು.

ಒಬ್ಬ ಮನುಷ್ಯ ಸತ್ತ ಮೇಲೆಯೇ ಅವನು ಸತ್ತಿದ್ದು ಈ ಕಾರಣಕ್ಕಿರಬಹುದಾ ಅಥವಾ ಆ ಕಾರಣಕ್ಕಿರಬಹುದಾ ಎಂದು ನಾವು ಆಲೋಚಿಸಲು ತೊಡಗುತ್ತೇವೆ. ಎರಡು ಮೂರು ದಿನದಿಂದ ಅವನು ಯಾಕೋ ಸಪ್ಪಗಿದ್ದ. ತನಗೆ ಮನೆಯಲ್ಲಿರಲಿಕ್ಕೆ ಯಾಕೋ ಹೆದರಿಕೆ! ಅದಕ್ಕಾಗಿ ಹೊರಗೆ ಅಡ್ಡಾಡಲು ಬರುತ್ತಿದ್ದೇನೆ ಎಂದಿದ್ದ. ಆತ ನಮ್ಮೊಡನೆ ಬಂದು ಮಾತುಕತೆ ಆಡಿದ್ದರಿಂದಲೆ ಸತ್ತಿರಬಹುದೆಂದು ಅವನ ಮನೆಯಲ್ಲಿ ಯೋಚಿಸಿದ್ದರೂ ಯೋಚಿಸಿರಬಹುದು. ಗೆಳೆಯರಿಂದಲೆ ಅವನಿಗೆ ಸಾವು ಬಂತು ಎಂದು ಯಾರೋ ಅಂದರಂತೆ. ರೂಪಾ ಅದನ್ನು ಹೇಳಲೋ ಬೇಡವೋ ಎಂಬಂತೆ ನನ್ನೆದರು ಹೇಳಿದಳು. ಅವಳ ಮಾತಿನ ಗತ್ತು ನೋಡಿದರೆ ನಾವೇ ಕೆಲವು ಗೆಳೆಯರು ಬಸವರಾಜನನ್ನು ಹೊರಗೆ ಕರೆದು ಕೊಂದೆವು ಎಂಬ ಭಾವವಿತ್ತು. 'ನಿನ್ನ ಅಪ್ಪನ ಸಾವಿಗೆ ನೀನೇ ಕಾರಣ!' ಎಂಬ ಮಾತು ನನ್ನ



ನಾಲಿಗೆಯವರೆಗೂ ಬಂದಿತ್ತು. ಅದನ್ನು ಕಷ್ಟಪಟ್ಟು ತಡೆದೆ. ಅದನ್ನು ಅವಳಿಗೆ ಹೇಳಿ ಏನು ಪ್ರಯೋಜನ? ನಾನು ಸುಮ್ಮನಾದೆ. ಅವಳಿಗೆ ಏನಾದರೂ ಹೇಳುವುದಕ್ಕೆ, ಕೇಳುವುದಕ್ಕೆ ಅದು ಸಮಯವೂ ಆಗಿರಲಿಲ್ಲ. ತಂದೆಯ ಮಾತನ್ನೆ ಅವಳು ಕೇಳಲಿಲ್ಲ. ಇನ್ನು ನನ್ನ ಮಾತನ್ನು ಹೇಗೆ ಕೇಳಿಯಾಳು? 'ಶೇಕಪ್ಪ. ನಮ್ಮ ರೂಪಾ ನಿನ್ನ ಮಾತು ತಗದು ಹಾಕಲಿಕ್ಕಿಲ್ಲಂತ ನನಗ ಅನಿಸ್ತದ.' ಬಸವರಾಜ ಮೊನ್ನೆ ಹೇಳಿಯೇ ಹೇಳಿದ್ದ. ನಾನು ಕೇಳಿಸಿದರೂ ಕೇಳಿಸಿಲಾರದಂತೆ ಸುಮ್ಮನಿದ್ದೆ.

ರೂಪಾ ಇತ್ತೀಚೆಗೆ ತಾನು ಕೆಲಸ ಮಾಡುತ್ತಿದ್ದ ಟಿ.ವಿ.ಯನ್ನು ಬಿಟ್ಟು ಮತ್ತೊಂದು ಟಿ.ವಿ.ಯಲ್ಲಿ ಕೆಲಸಕ್ಕೆ ಸೇರಿದ್ದಳು. ಅದು ಅಪ್ಪನಿಗೆ ಅಷ್ಟು ಇಷ್ಟವಾಗಿರಲಿಲ್ಲ. ಮಗಳೊಡನೆ ಜಗಳಾಡಿದ್ದನೆಂದು ಕಾಣುತ್ತದೆ. ಆಕೆ ಅಪ್ಪನ ಮಾತನ್ನು ಪರಿಗಣಿಸಿರಲಿಲ್ಲ. ನನ್ನ ಮುಂದೆ ಕಣ್ಣೀರು ತಂದು ಹೇಳಿಕೊಂಡಿದ್ದ. ನಾನು ಏನು ಹೇಳಬೇಕು? ಏನೋ ಸಮಾಧಾನ ಮಾಡಿದ್ದೆ: 'ಏಯ್ ಬಸಣ್ಣ, ಈಗಿನ ಮಕ್ಕಳು ನಮ್ಮ ಮಾತು ಕೇಳ್ತಾರಂತ ನಿನಗ ಅನಿಸ್ತದೇನು? ರೂಪಾಗ ತನಗ ತಾನೇ ಗೊತ್ತಾಗ್ತದ. ಆ ಪೇಪರ್ ಸರಿ ಇಲ್ಲ, ಆ ಚ್ಯಾನೆಲ್ ಸರಿ ಇಲ್ಲ ಅಂತ ಹುಡುಗರು ಬಿಟ್ಟು ಬ್ಯಾರೆ ಕೆಲಸ ಹುಡುಕೋದು ಸರ್ವೆಸಾಮಾನ್ಯ. ಐಟಿಬೀಟಿ ಹುಡುಗರು ಮಾಡೂದಿಲ್ಲೇನು? ರೂಪಾಂದು ಹಂಗ. ಅದಕ್ಯಾಕ ಅಷ್ಟು ತಲಿ ಕೆಡಿಸಿಕೊಳ್ತಿ? ಈಗಿನ ಹುಡುಗರು ತಮಗ ಸರಿ ಅನ್ನಿಸಿದ್ದನ್ನ್ ಮಾಡ್ತಾರು ಬಿಡು. ನಾವ್ಯಾಕ ಸುಮ್ಮನ ಮೂಗು ತೂರಿಸೋದು?' ನಾನು ಮಾತು ತೇಲಿಸಿದ್ದೆ. ರೂಪಾಳನ್ನು ಅಷ್ಟು ಸಲೀಸಾಗಿ ಒಪ್ಪಿಸುವುದು ಸಾಧ್ಯವಿಲ್ಲವೆಂದು ನನಗೆ ಗೊತ್ತಿತ್ತು. 'ಶೇಕಣ್ಣ, ನಾ ಇತ್ತೀಚಿಗಿ ಟಿ.ವಿ. ನೋಡೋದು ಬಿಟ್ಟೇನಿ ಅಂತ ಹೇಳಿದ್ನಿ ನೋಡು. ಮೊದಮೊದಲು ಈ ಕೊರೊನಾ ಸುದ್ದಿ ವಿಪರೀತ ಅನಿಸಿ ಅದನ್ನು ಆಫ್ ಮಾಡಿದ್ದೆ. ಬ್ಲ್ಯಾಕ್ ಫಂಗಸ್ ಅಂತ ಬಂದ ಮ್ಯಾಲಂತೂ ಮನಿಯೊಳಗಿನ ಧೂಳು, ಹಳೆ ಅರಿವಿ, ಚರ್ಮದ ಫಂಗಸ್ ಇಂತಹವೆಲ್ಲ ಈ ರೋಗ ಹಬ್ಬಲಿಕ್ಕೆ ಕಾರಣ ಆಗ್ತಾವಂತ ಟಿ.ವಿ.ಯೊಳಗ, ವ್ಯಾಟ್ಸ್‌ಆಪ್‌ದೊಳಗ ಬರೋವು ಏನಪಾ. ಅವನ್ನ ನೋಡಿದಾಗೆಲ್ಲ ನನಗ ಈ ಕರಿಬೂಷ್ಟ್ ರೋಗ ಎಲ್ಲಿ ನೋಡ್ತೇನಿ ಅಲ್ಲಿ ಕಾಣಲಿಕ್ಕೆ ಸುರುವಾತು. ಆಮ್ಯಾಲ ಅದನ್ನ ಹೆಂಗ ಮಾಡಿ ಮರೆತೆ. ಸ್ವಲ್ಪ ದಿನ ಆದ ಮ್ಯಾಲ ನನಗ ಇನ್ನೊಂದು ಆತಂಕ ಕಾಡಲಿಕ್ಕೆ ಸುರುವಾತು. ನಮ್ಮ ರೂಪಾ ಬ್ಯಾಡಬ್ಯಾಡಂದ್ರೂ ನನಗ ಯಾವ ಟಿ.ವಿ. ಕಾರ್ಯಕ್ರಮ ಸೇರ್‍ತಿರಲಿಲ್ಲವೋ ಅದೇ ಟಿ.ವಿ ಸೇರಕೋಬೇಕಾ? ಅವಳ ಮಾತು, ವಾದ ಯಾಕೋ ಬದಲಿಯಾಗ್ತಾ ಅದಾವೇನೋ ಅನಿಸಲಿಕ್ಕೆ ಸುರುವಾತು. ಖರೇ ಆಕೀ ಎಷ್ಟ ಲಗೂ ಬದಲಿಯಾಗಿಬಿಟ್ಲು? ಎರಡು ಮೂರು ಪಾರ್ಟಿಯವರು ಆಕೀಗಿ ಆಹ್ವಾನ ಮಾಡಿದ್ರಂತ. ಯುವಮೋರ್ಚಾಗ ಸೇರಕೊಳ್ಳಮ್ಮ ಅಂತ ಬೆನ್ನ ಹತ್ಯಾರಂತ. ಟಿ.ವಿ. ಸ್ಟುಡಿಯೋಕ್ಕೂ ಬಾಳ ಮಂದಿ ರಾಜಕಾರಣಿಗಳು ಬರ್‍ತಿರತಾರು ನೋಡು. ಕ್ಯಾಮರಾದ ಮುಂದ ಕುತಗೊಂಡ ಒಣಮಾತು ಮಾತಾಡಿಕೋಂತ ಎಷ್ಟು ದಿನಾಂತ ಇಲ್ಲಿ ಇರ್‍ತೀರಿ? ರಾಜಕೀಯ ಸೇರಕೊಂಡ್ರ ಸಮಾಜದಾಗ ಬಾಳ ಲಗೂ ಪರಿವರ್ತನಾ ತರಬಹುದು ಅಂತ ಆಕೀಗಿ ಹೇಳ್ಯಾರಂತ. ಅದನ್ನ ನನ್ನ ಮುಂದ ಹೇಳತಿದ್ಲು. ನನ್ನ ಕಾಲಮ್ಮಿನೊಳಗ ವಿರೋಧ ಪಕ್ಷದವರು ಮಾತಾಡಿದಂಗ ನಾ ಬರಿಯಾಂವ. ಮಗಳು ನೋಡಿದರೆ ಆಡಳಿತ ಪಕ್ಷದ ಪರವಾಗಿ ಇರೋ ಟಿ.ವಿ.ಯೊಳಗ ಕೆಲಸ ಮಾಡ್ತಾಳ. ಮಂದಿ ನನ್ನ ಮ್ಯಾಲೂ ಸಂಶಯ ಮಾಡಿದರೂ ಏನೂ ತಪ್ಪಿಲ್ಲ. ಹೌದಲ್ಲೋ? ನೀನೇ ಹೇಳು.' ನನ್ನ ಮನಸ್ಸು ಹೌದೆಂದು ಒಂದು ಕಡೆ ಹೇಳುತ್ತಿದ್ದರೂ ಬಸಣ್ಣನನ್ನು ಅವನ ಒತ್ತಡದಿಂದ ಪಾರು ಮಾಡುವುದು ನನಗೆ ಬೇಕಾಗಿತ್ತು. ;ಹಂಗ್ಯಾಕ ನೀ ತಿಳಕೋತಿಯೋ ಬಸಣ್ಣಾ. ಆಕೀ ತತ್ವ ಆಕೀಗೆ. ನಿನ್ನ ತತ್ವ ನಿನಗ.' ಆ ಮಾತುಗಳು, ಅವನು ಕುಳಿತಿದ್ದ ಸನ್ನಿವೇಶ ಎಲ್ಲ ಈಗ ನೆನಪಾಗಿ ನನ್ನ ಕಣ್ಣು ತೇವಗೊಂಡವು.

ಬಸವರಾಜ ತನ್ನ ತತ್ವಗಳನ್ನು ತುಂಬ ಸರಳವಾಗಿ ಬದುಕಿಹೋದ ಎನಿಸಿತು. ಅವುಗಳಲ್ಲಿಯೇ ಅವನ ನೆನಪು ಹುಡುಕಬೇಕು ಎನ್ನುವಂತಹ ಭಾವ ನನ್ನಲ್ಲಿ ತುಂಬಿಕೊಂಡಿತು. 'ನಿನ್ನ ತತ್ವ ನಿನಗ, ಆಕೀ ತತ್ವ ಆಕೀಗಿ.' ಅವನಿಗೆ ಅಂದು ಹೇಳಿದ್ದ ಮಾತು ನಾವೀಗ ಕುಳಿತಿದ್ದ ಅವನು ಭೌತಿಕವಾಗಿ ಇಲ್ಲದ ಕೋಣೆಯಲ್ಲಿ ಸುಳಿದಾಡುತ್ತಿದ್ದವು. ಅವು ಒಮ್ಮೆ ಏರುದನಿಯಲ್ಲಿ ಪ್ರತಿಧ್ವನಿಸಿದಂತಾಗಿ ನಾನು ಗಾಬರಿಗೊಂಡು 'ಬ್ಲ್ಯಾಕ್ ಫಂಗಸ್' ಎಂದೆ. ಕೋಣೆಯಲ್ಲಿ ಎರಡು ಮೂರು ಮಂದಿ ಮಿಕಿಮಿಕಿ ನನ್ನ ಮುಖ ನೋಡಿದರು. ಗೆಳೆಯ ಅಗಲಿದ ದುಃಖದಲ್ಲಿ ನಾನೇನೋ ನೋವಿನ ಶಬ್ದ ಹೇಳಿದೆ ಎಂದು ಅವರು ಬಹುಶಃ ಅಂದುಕೊಂಡಿರಬೇಕು. ಅದು ಎಷ್ಟು ಮಂದಿಗೆ ಕೇಳಿಸಿತೋ ಇಲ್ಲವೋ ತಿಳಿಯದು. ಬಹಳ ಹೊತ್ತು ಇಲ್ಲಿ ಕುಳಿತರೆ ರೂಪಾಳಿಗೆ ಇಷ್ಟವಾಗದ ಮಾತುಗಳು ನನ್ನಿಂದ ಹೊರಬಂದಾವು ಎಂಬ ಹೆದರಿಕೆ ನನ್ನನ್ನು ಮುತ್ತಿಕೊಂಡಿತು. ನನ್ನೊಳಗೆ ತಾಕಲಾಡುತ್ತಿದ್ದ ಆಲೋಚನೆಗಳು ಅವಳಿಗೆ ಕೇಳಿದವೋ ಏನೋ ಎನ್ನುವ ರೀತಿಯಲ್ಲಿ ಟಿ.ವಿ. ಸಮನ್ವಯಕಾರ್ತಿ ರೂಪಾ ಆಶ್ಚರ್ಯದಿಂದ ನನ್ನ ಮುಖ ನೋಡಿದಳು!

ಪ್ರತಿಕ್ರಿಯಿಸಿ: **feedback@sudha.co.in**